ರಾಜ್ಯದಲ್ಲಿ ಮಧುಮೇಹ, ತೀವ್ರ ರಕ್ತದೊತ್ತಡ ಮತ್ತು ಅಸ್ತಮಾದಿಂದ ಬಳಲುತ್ತಿರುವ ರೋಗಿಗಳು

4552 (5302) : ಶ್ರೀ ಪಾಟೀಲ್ ಶಿವಾನಂದ ಸಿದ್ದರಾಮನಗೌಡ (ತಿಕೋಟ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಮಧುಮೇಹ, ತೀವ್ರ ರಕ್ತದೊತ್ತಡ ಮತ್ತು ಅಸ್ತಮಾದಿಂದ ಬಳಲುತ್ತಿರುವವರ ಸಂಖ್ಯೆ ಎಷ್ಟು? (ಜಿಲ್ಲಾವಾರು ಮಾಹಿತಿ ನೀಡುವುದು).

ಆ) ಈ ರೋಗಿಗಳಿಂದ ಬಳಲುತ್ತಿರುವ ಪಟ್ಟಣ ಪ್ರದೇಶದಲ್ಲಿನ ರೋಗಿಗಳ ಸಂಖ್ಯೆ ಮತ್ತು ಗ್ರಾಮೀಣ ಪ್ರದೇಶಗಳಲ್ಲಿನ ರೋಗಿಗಳ ಸಂಖ್ಯೆ ಎಷ್ಟು?

ಇ) ಈ ರೋಗಗಳನ್ನು ಗುಣಪಡಿಸುವುದಕ್ಕಾಗಿ ಸರ್ಕಾರ ಏನಾದರೂ ಹೊಸ ಚಿಕಿತ್ಸಾ ವಿಧಾನ ಜಾರಿಗೊಳಿಸಿದೆಯೇ; ಯಾವ ವಿಧಾನ ಜಾರಿಗೆ ತರಲಾಗಿದೆ.

ಈ) ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಈ ಹೊಸ ವಿಧಾನ ಜಾರಿಯಲ್ಲಿದೆ.

ಉ) ಇದಕ್ಕಾಗಿ ಪ್ರತಿ ಜಿಲ್ಲೆಗೆ ನೀಡಲಾದ ಅನುದಾನ ಎಷ್ಟು? ಬಿಡುಗಡೆಗೊಳಿಸಿರುವುದೆಷ್ಟು?

ಶ್ರೀ ಕಾಗೋಡು ತಿಮ್ಮಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಮಧುಮೇಹ, ತೀವ್ರ ರಕ್ತದೊತ್ತಡ ಮತ್ತು ಅಸ್ತ ಮಾದಿಂದ ಬಳಲುತ್ತಿರುವವರ ಸಂಖ್ಯೆಯ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಾಗಲೀ, ರಾಜ್ಯ ಮಟ್ಟದಲ್ಲಾಗಲೀ ನಿಖರವಾದ ಸಮೀಕ್ಷೆ ಕೈಗೊಂಡ ವರದಿಗಳಿಲ್ಲ.

ಆ) 1. ಮಧುಮೇಹ: ತಜ್ಞರ ಅಧ್ಯಯನದ ಒಂದು ವರದಿ ಪ್ರಕಾರ ರಾಜ್ಯದ ಗ್ರಾಮೀಣ ಜನರೆಲ್ಲ ಶೇ. 7.5 ಮತ್ತು ನಗರದ ಜನರಲ್ಲಿ ಶೇ. 12.4 ಮಧುಮೇಹ ರೋಗ ಇರುವುದಾಗಿ ಅಂದಾಜು ಮಾಡಲಾಗಿದೆ.

2. ತೀವ್ರ ರಕ್ತ ದೊತ್ತಡ : ತಜ್ಞರ ಅಧ್ಯಯನದ ಒಂದು ವರದಿ ಪ್ರಕಾರ ನಗರ ವಾಸಿ ಪುರುಷರಲ್ಲಿ ಶೇ. 5.9 ಮತ್ತು ಸ್ತ್ರೀಯರಲ್ಲಿ ಶೇ. 6.99, ಗ್ರಾಮೀಣ ವಾಸಿ ಪುರುಷರಲ್ಲಿ ಶೇ. 3.55 ಮತ್ತು ಸ್ತ್ರೀಯರಲ್ಲಿ ಶೇ. 3.59 ರಷ್ಟು ಇರುವ ಅಂದಾಜು ಮಾಡಲಾಗಿದೆ.

3. ಅಸ್ತಮಾ ತಜ್ಞರ ಅಧ್ಯಯನದ ಒಂದು ವರದಿ ಮುನ್ಸೂಚನೆಯಂತೆ ಶೇ. 3 ರಿಂದ 4 ರೋಗಿಗಳಿರುವುದು ಅಂದಾಜು ಮಾಡಲಾಗಿದೆ.

ಇ) ಈ ರೋಗಿಗಳ ಚಿಕಿತ್ಸೆಗಾಗಿ ಸರ್ಕಾರ ಸೂಕ್ತ ಔಷಧೋಪಚಾರಗಳನ್ನು ಪ್ರಸ್ತುತ ಪದ್ಧತಿಯಂತೆ ಒದಗಿಸಲಾಗುತ್ತಿದೆ. ಯಾವ ಹೊಸ ವಿಧಾನಗಳು ಜಾರಿಯಲ್ಲಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಅನುದಾನ ಲಭ್ಯವಿಲ್ಲ.

ತಿಕೋಟ ವಿಧಾನಸಭಾ ಕ್ಷೇತ್ರದಲ್ಲಿರುವ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಕೊಠಡಿಗಳ ನಿರ್ಮಾಣ ಮತ್ತು ದುರಸ್ತಿ

4553 (5303) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತಿಕೋಟ ವಿಧಾನ ಸಭಾ ಮತಕ್ಷೇತ್ರದಲ್ಲಿನ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಹೊಸ ಕೊಠಡಿಗಳನ್ನು ನಿರ್ಮಿಸಲು ಮತ್ತು ಪ್ರಾಥಮಿಕ ಕೊಠಡಿಗಳನ್ನು ದುರಸ್ತಿಗೊಳಿಸಲು ಎಷ್ಟು ಅನುದಾನ ಬಿಡುಗಡೆ ಮಾಡಿದೆ;

ಆ) ಈ ಅನುದಾನವನ್ನು ಬಳಸಿಕೊಂಡು ಆ ಕ್ಷೇತ್ರದಲ್ಲಿ ಯಾವ ಶಾಲೆಗಳನ್ನು ನಿರ್ಮಿಸಲಾಗುತ್ತಿದೆ ಮತ್ತು ದುರಸ್ತಿಗೊಳಿಸಲಾಗುತ್ತಿದೆ ಕಾಮಗಾರಿಗಳು ಯಾವ ಹಂತದಲ್ಲಿದೆ;

ಇ) ಯಾವ ಇಲಾಖೆಯಿಂದ ಕೆಲಸವನ್ನು ನಿರ್ವಹಿಸಲಾಗುತ್ತಿದೆ; ಅನುದಾನವನ್ನು ಯಾವ ಇಲಾಖೆಗೆ ಬಿಡುಗಡೆಗೊಳಿಸಲಾಗಿದೆ;

ಈ) ಬಿಜಾಪುರ ಜಿಲ್ಲಾ ಪಂಚಾಯತ್‌ನಿಂದ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಸರ್ಕಾರಕ್ಕೆ ಪತ್ರ ಬರೆದು ತಿಳಿಸಲಾಗಿದ್ದು ನಿಜವೇ;

ಉ) ಯಾವ ಕಾರಣಕ್ಕಾಗಿ ಕಾಮಗಾರಿಗಳನ್ನು ಸ್ಥಗಿತಗೊಳಿಸುವಂತೆ ಪತ್ರ ಬರೆದಿರುತ್ತಾರೆ.

ಊ) ಸರ್ಕಾರ ಈ ಬಗ್ಗೆ ಕೈಗೊಂಡ ಕ್ರಮಗಳೇನು; ಯಾವ ಕಾಲಮಿತಿಯೊಳಗೆ ಕೆಲಸಗಳನ್ನು ಮುಕ್ತಾಯಗೊಳಿಸಲಾಗುವುದು?

ಪ್ರೊ. ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) ತಿಕೋಟ ವಿಧಾನ ಸಭಾ ಮತಕ್ಷೇತ್ರದಲ್ಲಿ ಸರ್ಕಾರಿ ಪ್ರಾಥಮಿಕ ಶಾಲಾ ಕೊಠಡಿ ನಿರ್ಮಾಣಕ್ಕೆ ರೂ. 13.15ಲಕ್ಷ ದುರಸ್ಥಿಗಾಗಿ ರೂ. 10.00 ಲಕ್ಷ ಹಾಗೂ ಪ್ರೌಢ ಶಾಲಾ ಕೊಠಡಿ ನಿರ್ಮಾಣಕ್ಕೆ ರೂ. 17.50 ಲಕ್ಷ, ಹೀಗೆ ಒಟ್ಟು ರೂ. 40.65 ಲಕ್ಷಗಳನ್ನು ಸರ್ಕಾರವು ಬಿಡುಗಡೆ ಮಾಡಿದೆ.

ಆ) ವಿವರವನ್ನು ಅನುಬಂಧದಲ್ಲಿ ಒದಗಿಸಿದೆ.

ಇ) ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗದಿಂದ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ.

ಈ) ಸರ್ಕಾರದ ಮಾರ್ಗದರ್ಶನ ಕೋರಿ ಕಾಮಗಾರಿಗಳನ್ನು ಸ್ಥಗಿತಗೊಳಿಸಿ ಸರ್ಕಾರಕ್ಕೆ ಪತ್ರ ಬರೆದಿರುವುದು ನಿಜ.

ಉ) ಸರ್ಕಾರದ ಮಾರ್ಗದರ್ಶನ ಕೋರುವ ಸಲುವಾಗಿ.

ಊ) ಸರ್ಕಾರವು ಇದರ ಬಗ್ಗೆ ಈಗಾಗಲೇ ಮಾರ್ಗದರ್ಶನವನ್ನು ನೀಡಿದ್ದು, ಕಾಮಗಾರಿಗಳನ್ನು ಸೆಪ್ಟೆಂಬರ್ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು.

ಪ್ರಶ್ನೆ ಸಂಖ್ಯೆ ಅನುಬಂಧ

ಕ್ರಮ ಸಂಖ್ಯೆ	ಪ್ರಾಥಮಿಕ ಶಾಲಾ ಕೊಠಡಿ ನಿರ್ಮಾಣ	ಬಿಡುಗಡೆ ಮಾಡಲಾದ ಅನುದಾನ	ಪ್ರೌಢಶಾಲಾ ಕೊಠಡಿ ನಿರ್ಮಾಣ	ಬಿಡುಗಡೆ ಮಾಡಲಾದ ಅನುದಾನ	ಪ್ರಾಥಮಿಕ ಶಾಲಾ ದುರಸ್ತಿ	ಬಿಡುಗಡೆ ಮಾಡಲಾದ ಅನುದಾನ
1.	ಕೆ.ಬಿ. ಎಸ್. ಅಹೇರಿ	ರೂ. 1.50 ಲಕ್ಷ	ಸ.ಪ್ರೌ.ಶಾ. ಅರ್ಜುಣಗಿ	ರೂ. 3.50 ಲಕ್ಷ	ಕೆ.ಬಿ. ಎಸ್. ನಾಗಠಾಣ	ರೂ. 2.00 ಲಕ್ಷ
2.	ಕೆ.ಬಿ.ಎಸ್. ಜಂಬಗಿ ಅ	ರೂ. 1.50 ಲಕ್ಷ	ಸ.ಪ್ರೌ.ಶಾ. ನಾಗಠಾಣ	ರೂ. 3.50 ಲಕ್ಷ	ಕೆ.ಬಿ.ಎಸ್. ತಿಗಣಬೀದರ	ರೂ. 1.00 ಲಕ್ಷ
3.	ಕೆ.ಬಿ.ಎಸ್. ಜಂಬಗಿ ಅ	ರೂ. 1.50 ಲಕ್ಷ	ಸ.ಪ್ರೌ.ಶಾ. ಬಾಬಾ ನಗರ	ರೂ. 3.50 ಲಕ್ಷ	ಕೆ.ಬಿ.ಎಸ್. ಹೊನವಾಡ	ರೂ. 1.00 ಲಕ್ಷ

1	2	3	4	5	6	7
4.	ಕೆ.ಬಿ.ಎಸ್. ಜಂಬಗಿ ಅ(ಪ್ರಭುದೇವರ ಬೆಟ್ಟ)	ರೂ. 1.50 ಲಕ್ಷ	ಸ.ಪ್ರೌ.ಶಾ. ಕಳ್ಳವಟಗಿ	ರೂ. 3.50 ಲಕ್ಷ	ಕೆ.ಬಿ.ಎಸ್. ಹೆಬ್ಬಾಳಟ್ಟಿ	ರೂ. 1.00 ಲಕ್ಷ
5.	ಕೆ.ಬಿ. ಎಸ್ ಅರಕೇರಿ ಲೋನಾರಾತಾಂಡಾ	ರೂ. 1.50 ಲಕ್ಷ	ಸ.ಪ್ರೌ.ಶಾ. ಹುಬನೂರ	ರೂ. 3.50 ಲಕ್ಷ	ಕೆ.ಬಿ.ಎಸ್. ಅರ್ಜುನಗಿ	ರೂ. 1.50 ಲಕ್ಷ
6.	ಕೆ.ಬಿ.ಎಸ್. ನಿಹೋಣವಸ್ತಿ	ರೂ. 1.50 ಲಕ್ಷ			ಕೆ.ಬಿ.ಎಸ್. ಕರ್ನಾಳ	ರೂ. 1.00 ಲಕ್ಷ
7.	ಕೆ.ಬಿ.ಎಸ್. ಜಾಲಗೇರಿ ಟೋಕಳವಾಡಿ	ರೂ. 1.50 ಲಕ್ಷ			ಕೆ.ಬಿ.ಎಸ್. ಸಾರವಾಡ	ರೂ. 1.00 ಲಕ್ಷ
8.	ಕೆ.ಜಿ.ಎಸ್. ತಿಕೋಟಾ	ರೂ. 1.50 ಲಕ್ಷ			ಕೆ.ಬಿ.ಎಸ್. ಹುಬನೂರ	ರೂ. 0.50 ಲಕ್ಷ
9.	ಕೆ.ಜಿ.ಎಸ್. ಅರ್ಜುಣಗಿ	ರೂ. 1.15 ಲಕ್ಷ			ಕೆ.ಬಿ.ಎಸ್. ದಾಶ್ಯಾಳ	ರೂ. 0.50 ಲಕ್ಷ
10.	–	–			ಕೆ.ಬಿ.ಎಸ್. ಜಾಲಗೇರಿ	ರೂ. 0.50 ಲಕ್ಷ
	ಒಟ್ಟು	ರೂ. 13.15 ಲಕ್ಷ		ರೂ. 17.50 ಲಕ್ಷ		ರೂ. 10.00 ಲಕ್ಷ

ರಾಜ್ಯದಲ್ಲಿ ನಿರ್ಮಿತಿ ಕೇಂದ್ರಗಳ ಕಾರ್ಯಕ್ರಮಗಳು

4554 (5304) : ಶ್ರೀ ಪಾಟೀಲ್ ಶಿವಾನಂದ ಸಿದ್ಧರಾಮಗೌಡ (ತಿಕೋಟ) : ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನಿರ್ಮಿತಿ ಕೇಂದ್ರಗಳು ಕಾರ್ಯರೂಪಕ್ಕೆ ಬಂದಿದ್ದು ಯಾವ ಸಾಲಿನಲ್ಲಿ;

ಆ) ನಿರ್ಮಿತಿ ಕೇಂದ್ರದ ರೂಪುರೇಷೆಗಳೇನು;

ಇ) ನಿರ್ಮಿತಿ ಕೇಂದ್ರದ ಕಾರ್ಯ ವೈಖರಿಯನ್ನು ಪರಿಶೀಲಿಸುವ ಅಧಿಕಾರ ಯಾರಿಗಿದೆ; ಜಿಲ್ಲಾ ಪಂಚಾಯತ್ ದಿಂದ ನೇರವಾಗಿ ನಿರ್ಮಿತಿ ಕೇಂದ್ರಕ್ಕೆ ಹಣ ನೀಡಬಹುದೆ;

ಈ) ನಿರ್ಮಿತಿ ಕೇಂದ್ರದಿಂದ ತೆಗೆದುಕೊಳ್ಳಲಾದ ಅಭಿವೃದ್ಧಿ ಕಾರ್ಯಗಳನ್ನು ಪರಿಶೀಲಿಸಲು ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಅಧಿಕಾರವಿದೆಯೇ;

ಉ) ಕಾರ್ಯನಿರ್ವಾಹಕ ಅಧಿಕಾರಿಗಳು ತಾಲ್ಲೂಕು ಪಂಚಾಯತ್ ಇವರಿಗೆ ನಿರ್ಮಿತಿ ಕೇಂದ್ರದ ಕಾಮಗಾರಗಳನ್ನು ಪರಿಶೀಲಿಸಲು ಅಧಿಕಾರವಿದ್ದರೆ ಬಿಜಾಪುರ ತಾಲ್ಲೂಕಿನ ನಿರ್ಮಿತಿ ಕೇಂದ್ರದ ಕಾಮಗಾರಿಗಳನ್ನು ಕಳೆದ ಮೂರು ವರ್ಷಗಳಿಂದ ಯಾಕೆ ಪರಿಶೀಲಿಸಿಲ್ಲ?

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ವಸತಿ ಸಚಿವರು)

ಅ) 1988 ನೇ ಸಾಲಿನಲ್ಲಿ.

ಆ) ಸರ್ಕಾರದ ವಸತಿ ಯೋಜನೆಗಳು ಹಾಗೂ ಶಾಲಾ ಕಟ್ಟಡಗಳು ಮತ್ತು ಇತರೆ ಕಟ್ಟಡ ನಿರ್ಮಾಣಗಳ ಅನುಷ್ಠಾನದಲ್ಲಿ ಮಿತವ್ಯಯಕಾರಿ ಕಟ್ಟಡ ನಿರ್ಮಾಣ ತಂತ್ರಜ್ಞಾನ ಅಳವಡಿಕೆ ಹಾಗೂ ತಂತ್ರಜ್ಞಾನ ವರ್ಗಾವಣೆ, ಉತ್ಪಾದನೆ ಹಾಗೂ ತರಬೇತಿ ಇವು ನಿರ್ಮಿತಿ ಕೇಂದ್ರದ ರೂಪುರೇಷೆಗಳು.

ಇ) ನಿರ್ಮಿತಿ ಕೇಂದ್ರದ ಕಾರ್ಯವೈಖರಿಯನ್ನು ಪರಿಶೀಲಿಸುವ ಅಧಿಕಾರ ಆಯಾ ಜಿಲ್ಲಾಧಿಕಾರಿ ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಿಲ್ಲಾ ಪಂಚಾಯಿತಿ ಮತ್ತು ನಿರ್ಮಿತಿ